# HIGH COURT OF KARNATAKA

## CIVIL JUDGE MAIN EXAMINATION-2018

## LAW PAPER III

**Framing of charges and writing of a judgment in Criminal case**

Date: 15.07.2018
ದಿನಾಂಕ: 15ನೇ ಜುಲೈ 2018

Max Marks: 100

Time: 2.00 PM to 5.00 PM
ಸಮಯ: ಮಧ್ಯಾಹ್ನ 2.00 ರಿಂದ 5.00 ಗಂಟೆ

Note:

1. Option is given to the candidates to write answers either in English or in Kannada
   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy in the questions in English language and Kannada language, the questions as framed in English language shall prevail.
   ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ಲೋಪ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

1. **Frame appropriate charge for the Trial of an accused on the basis of the following charge sheet materials.**

**Marks: 15**

It is alleged in the charge sheet filed by Sampige Police Station that on 21.10.2000 at about 9.00 a.m, on Sampige road near Talavar lane on rough road at Hirikodi village, A1 to 6 i.e., Subhas, Kitti Manja, Ananda, Shekara, Nagaraja alias Naga and Mani formed themselves into an unlawful assembly with an intention to commit an offence against the complainant-Fakirappa on the ground that the complainant had informed the police authorities regarding the theft of wood kept in the backyard of their house and the accused with their common object, committed rioting against the complainant-Fakirappa and C.Ws.4 to 6 by holding weapons like stones, clubs, reaper, sickle and C.Ws.4 Keshava and C.W.6 Narayana have sustained grievous injuries due to the assault made by

the accused and the complainant Fakirappa and C.W.5 Gangaraj has sustained simple injuries on their body by the act of the accused and the accused have used vulgar words as 'Bolimagane', 'Sulemagane' against the complainant and C.Ws.4 to 6 with an intention to commit breach of peace and the accused have criminally intimidated the complainant and witnesses by giving threat to their life that if they file any complaint with the police, they are going to kill them and also caused loss by breaking open the front door of the house of C.W.6 Narayana.

Therefore, the complainant Fakirappa has lodged a complaint before the jurisdictional police.

**2.** When any person under twenty one years of age is found guilty of having committed an offence punishable with imprisonment, tried by you as a Magistrate of the First Class, how would you deal with this case in your Judgment by keeping in view of the provisions of the Probation of Offenders Act, 1958. Explain.

**Marks: 10**

**3. Write a considered judgment in the following case by giving valid and cogent reasons assuming rival contentions from the facts.**

**Marks: 75**

CC 650/2010

**Complainant:** State of Karnataka
represented by
Ganganagar police station

**Vs**

**Accused:** 1) Subbaraya
S/o Gangadarappa
Aged 40 years
Kelagadde Village
Ganganagar Taluk

2) Krishnappa
S/o Gangadarappa
Aged 38 years
Kelagadde Village
Ganganagar Taluk

3) Ramesh
S/o Muniyappa
Aged 50 years
Ganganagar Taluk

**Facts of the case:**

It is alleged in the charge sheet filed by Ganganagar Police Station that on 03.06.2010 at 5.00 P.M, Accused No.1 to 3 with their common intention to commit an offence, trespassed into the property bearing Sy.No.15 measuring 1 acre 10 guntas situated at Kelagadde village and illegally started to plough the said land with help of tractor. When CW1 and 2 questioned the act of accused persons by saying that there is a prohibition order issued by the Civil Court, A1 to 3 abused CW1 and 2 in filthy language as Bolimakkale and Sulemakkale and assaulted CW1 and 2 with their hands and pulled the nighty worn by CW1 and it was torn and thereby tried to outrage the modesty of CW1 and all the accused persons gave threat to CW1 and 2 by saying that if they file any complaint with the police, they are going to kill them. Therefore, CW1 Mangala lodged a complaint before jurisdictional police. As such this case came to be registered against the accused on 03.06.2010 at 6.45 P.M. in Crime No.46/2010 for the offences punishable under Section 323, 354, 504, 447, 506 r/w Section 34 of Indian Penal Code and sent FIR to the Civil Judge and JMFC Court, Ganganagar on 04.06.2010 at 10.50 A.M. through PC 1615 of Ganganagar Police Station.

On 04.06.2010, CW9 Hanumantharayappa, ASI went to the spot of occurrence and drew spot mahazar in the presence of CW1 Mangala, CW5 Venkatappa and CW6 Narasimha and seized torn nighty of CW1. On 05.06.2010, CW10 K.Narayana PSI went to the spot of occurrence and recorded the statements of CW3 Ashwath and CW4 Nagappa. On 08.06.2010, CW10 again went to the spot of occurrence and recorded the statement of CW2 Muniyappa. On 21.07.2010, CW10 obtained wound certificate of CW1 and 2 from the General Hospital, Ganganagar and obtained RTC of spot of occurrence from Tahsildhar, Ganganagar Taluk and on completion of investigation, filed charge sheet against the accused.

The accused No.1 to 3 pleaded not guilty to the charge framed by the Magistrate. The prosecution examined in all 8 witnesses as PW1 to PW8 and got marked documents as Ex.P1 to P8 and MO1.

The accused No.1 to 3 were examined under Section 313 of the Code of Criminal Procedure. They denied the entire prosecution case. Accused did not lead any defence evidence.

CW1 – PW1 – Mangala W/o Muniyappa        Duly sworn on 15.08.2012
Examination in Chief by APP

I know the accused. On 03.06.2010 at 5.30 P.M, we were working in our land bearing Sy.No.15 measuring 1 acre 10 guntas situated at Kelagadde village. At that time, all the accused came to our land with tractor and started to plough the land. We tried to stop the accused from ploughing the land. At that time, the accused abused me and my husband Muniyappa in filthy language as Bolimakkale, Sulemakkale and they assaulted me and my husband with their hands and gave threat to our life and pulled my nighty and it was torn. I went to the police station

on the same day and lodged a police complaint. Now I see the complaint, it is marked as Ex.P1 and my signature is marked as Ex.P1(a). On the next day, police came to the spot and drew mahazar in my presence. Police seized my nighty. Now I see the mahazar, marked as Ex.P2 and my signature is marked as Ex.P2(a). Now I identify my nighty, marked as MO1. Civil Court granted prohibition order against both of us not to plough the land bearing Sy.No.15. Accused tore my nighty with an intention to outrage my modesty.

Cross examination by Advocate for accused

My native place is Kelagadde Village. My husband's native place is Hanumanthanagar. Since 4-5 years, I have been residing at Kelagadde village. There are two litigation pending in the Civil Court pertaining to Sy.No.15. I do not know whether the accused are owning land in Sy.No.15. I do not know about the action taken against the accused for violation of Court orders. I do not know whether Sy.No.15 belongs to Accused No.1 Subbaraya. It is true that I am running provision store and I used to close the shop daily at 8.00 -9.00 P.M. The land bearing Sy.No.15 is situated at a distance of one kilometer from my provision store. It is not true to suggest that we interfered with the accused while they were ploughing the land. I do not know the boundaries of Sy.No.15. It is not true to suggest that I am deposing falsely. It is not true to suggest that police did not come to the spot to draw mahazar in my presence. It is not true to suggest that the police did not seize my nighty. It is not true to suggest that I have filed false complaint only to harass the accused.

Re-examination: Nil

R.O.I & A.C<br>
Sd/-<br>
JMFC.

Duly sworn on 18.04.2013

CW2 – PW2 – Muniyappa
Examination in Chief by APP

I know the accused. Myself and CW1 were working in the land bearing Sy.No.15. Accused came to the land bearing Sy.No.15 for ploughing with the help of Tractor inspite of prohibition order passed by the Civil Court. Myself and CW1 questioned the act of the accused. At that time, there was altercation between us and accused. Accused assaulted me and CW1 with their hands. They tore the nighty of CW1. Thereafter, I gave statement before the police. MO1 is the torn nighty of CW1 and it is already marked as MO1.

Cross examination by Advocate for accused:

My native place is Hanumanthanagar. CW1 is my wife. I do not know the extent of land owned by my father-in-law in Sy.No.15. It is true that the land owned by Accused is in Sy.No.15. My father-in-law own's land measuring 1 acre 10 guntas in Sy.No.15. It is not true to suggest that we raised quarrel with accused when they were ploughing their own land. It is not true to suggest that I gave complaint against accused through my wife in order to harass them. It is not true to suggest that the accused have not committed any offence. My wife was wearing black dotted nighty at the time of incident. It is not true to suggest that my wife was wearing chudidar dress. It is not true to suggest that I am deposing falsely by giving false complaint to take favorable order in the Civil Cases.

Re-examination: Nil.

R.O.I & A.C
Sd/-
JMFC

CW3 – PW3 – Ashwath
Examination in Chief by APP

Duly sworn on 22.08.2013

I know the accused. I do not know about the quarrel took place between CW1 and 2 and accused. I did not give any statement before the police.

(At this stage, learned APP prays permission to treat this witness as hostile. Permission is accorded. Learned APP is permitted to cross examine the witness)

Cross examination by APP

It is not true to suggest that on 03.06.2010 at 5.00 P.M., the accused trespassed into the land bearing Sy.No.15 belongs to CW1. It is not true to suggest that the accused were illegally ploughing the said land with the help of tractor. It is not true to suggest that when CW1 and 2 questioned the act of the accused, the accused abused CW1 and 2, assaulted them and tore nighty of CW1 with an intention to outrage her modesty and also gave threat to their life. It is not true to suggest that I had witnessed the incident and gave statement before the police. The statement said to have given to police is marked as Ex.P3. It is not true to suggest that I am deposing falsely to help the accused.

Cross examination by Advocate for accused: Nil

Re-examination: Nil.

R.O.I & A.C
Sd/-
JMFC

Duly sworn on 22.08.2013

CW4 – PW4 – Nagappa
Examination in Chief by APP

I know the accused. I do not know about the quarrel took place between CW1 and 2 and accused. I did not give any statement before the police.

(At this stage, learned APP prays permission to treat this witness as hostile. Permission is accorded. Learned APP is permitted to cross examine the witness)

Cross examination by APP

It is not true to suggest that on 03.06.2010 at 5.00 P.M, the accused trespassed into the land bearing Sy.No.15 belongs to CW1. It is not true to suggest that the accused were illegally ploughing the said land with the help of tractor. It is not true to suggest that when CW1 and 2 questioned the act of the accused, the accused abused CW1 and 2 assaulted them and tore nighty of CW1 with an intention to outrage her modesty and also gave threat to their life. It is not true to suggest that I had witnessed the incident and gave statement before the police. The statement said to have given to police is marked as Ex.P4. It is not true to suggest that I am deposing falsely to help the accused.

Cross examination by Advocate for accused: Nil

Re-examination: Nil.

R.O.I & A.C
Sd/-
JMFC

<u>CW5 – PW5 – Venkatappa,</u>
<u>Examination in Chief by APP:</u> Duly sworn on 22.08.2013

I know the accused. Police came to the spot of occurrence on the next day of the incident and drew mahazar in my presence. I have signed the mahazar. Now I see Ex.P2 mahazar. My signature is marked as Ex.P2(b). At the time of mahazar, police seized the torn nighty of CW1. Now I identify the nighty, which was already marked as MO1.

<u>Cross examination by Advocate for accused</u>

Police drew mahazar on 03.06.2010. I do not know the boundaries of the place where mahazar was drawn. I do not remember at to what time, the police came to the spot and drew the mahazar. At that time my self, Mangala, Ashwath, Muniyappa, Narasimha were present. It is not true to suggest that I have signed the mahazar in the police station. It is not true to suggest that I am deposing falsely to help CW1.

Re-examination: Nil.

R.O.I & A.C
Sd/-
JMFC

<u>CW7 – PW6 – Dr.Krishna Kumar</u>
<u>Examination in Chief by APP:</u> Duly sworn on 03.09.2013

I was working as Medical Officer in General Hospital, Ganganagar in the year 2010. On 03.06.2010 at 8.10 P.M., One Mangala came to the hospital for treatment with the history of assault. I examined her and found following injuries on her body:

1. A lacerated wound over right hand inner aspect 0.5 x 6 c.m. size

2. A lacerated wound over left hand 0.5 x 6 cms with torn clothes

The above mentioned injuries are simple in nature. I gave wound certificate marked as Ex.P5, my signature is marked as Ex.P5(a).

On the same day at 8.10 P.M., one Muniyappa came to the hospital for treatment with the history of assault. I examined him and found following injuries on his body:

1. Pain and tenderness over Right hand and Right chest and Right back

The above mentioned injuries are simple in nature. I gave wound certificate, marked as Ex.P6, my signature is marked as Ex.P6(a)

Cross examination by Advocate for accused:

It is true that the injuries mentioned in Ex.P5 and P6 can be caused if a person tripped and fell down. It is true that the age of the injuries is not mentioned in the wound certificates, but all injuries are fresh in nature.

Re-examination: Nil

R.O.I. & A.C
Sd/-
JMFC

CW9-PW7: Hanumantharayappa, ASI Duly sworn on 03.10.2013
Examination in Chief by APP:

I was working as ASI in Ganganagar police station from 09.06.2008 to 22.06.2011. Now I am working as ASI in Hanumanthanagar police station.

On 03.06.2010, when I was in charge of police station at about 6.45 P.M, one Mangala, Kelagadde Village appeared before me and gave written complaint. I registered a case in Crime No.46/2010 and prepared FIR and submitted to the Court. Now I identify my signature in Ex.P1, marked as Ex.P1(b). FIR is marked as Ex.P7, my signature is marked as Ex.P7(a).

On 04.06.2010 at 10.30 A.M., I went to the spot of occurrence and drew mahazar in the presence of CW1 and witnesses CW5 and CW6 and seized torn nighty produced by CW1. Now I see my signature in Ex.P2, marked as Ex.P2(c). Now I see the nighty which was seized by me, which was already marked as MO1. Subsequently, I handed over the case file to CW10 for further investigation.

Cross examination by Advocate for accused:

Mangala alone came to the police station to lodge a complaint. She was wearing torn nighty when she came to the police station to lodge a complaint. It is not true to suggest that I have prepared mahazar in the police station and took signature of the witnesses in the police station.

Re-examination: Nil

R.O.I. & A.C
Sd/-
JMFC

CW10 - PW8 K Narayana, PSI
Examination in Chief by APP:

Duly sworn on 03.10.2013

I was working as PSI in Ganganagar police station from 28.08.2008 to 05.07.2011.

On 05.06.2010, I received the case file from CW9 for further investigation and went to the spot of occurrence and recorded the

statements of CW3 Ashwath and CW4 Nagappa. I came to know that the accused surrendered before the Court and got released on bail. On 08.06.2010, I went to the village and recorded the statement of CW2 Muniyappa. On 21.07.2010, I obtained wound certificate of CW1 and 2 from General Hospital, Ganganagar. On the same day, I obtained RTC of spot of occurrence from Tahsildar, Ganganagar Taluk. After completion of investigation, I filed charge sheet against accused. Now I see the RTC, marked as Ex.P8. CW3 and 4 gave statement before me as per Ex.P3 and 4.

Cross examination by Advocate for accused:

It is true that as per the contents of mahazar, on the western side of spot of occurrence, there is a land of accused No.1 Subbaraya. I have not inquired as to what is the relationship between CW1 and eye witnesses. It is not true to suggest that I have filed false charge sheet without proper investigation.

Re-examination: Nil

R.O.I. & A.C
Sd/-
JMFC

**Documents:**

| | | |
|---|---|---|
| ExP1 | : | Complaint |
| ExP2 | : | Mahazar |
| ExP3 | : | Statement of CW3 |
| ExP4 | : | Statement of CW4 |
| ExP5 | : | Wound certificate of CW1 |
| ExP6 | : | Wound certificate of CW2 |
| ExP7 | : | First Information Report |
| ExP8 | : | RTC |

*******

## ಕಾನೂನು ಪ್ರಶ್ನೆ ಪತ್ರಿಕೆ – 3

**1.** ಈ ಕೆಳಗೆ ತೋರಿಸಿದ ದೋಷಾರೋಪಣ ಪತ್ರದಲ್ಲಿ ಪ್ರಸ್ತಾಪಿಸಿದ ಮಾಹಿತಿಗಳ ಆಧಾರದ ಮೇಲೆ ಆರೋಪಿತರ ವಿರುದ್ಧ ದೋಷಾರೋಪಣೆ ರೂಪಿಸಿ
**ಅಂಕಗಳು: 15**

ಸಂಪಿಗೆ ಪೋಲೀಸು ಠಾಣೆಯವರು ಸಲ್ಲಿಸಿದ ದೋಷಾರೋಪಣ ಪತ್ರದಲ್ಲಿ ಆಪಾದಿಸಿದಂತೆ ದಿನಾಂಕ 21.10.2000ದಲ್ಲಿ ಬೆಳಿಗ್ಗೆ 9.00 ಗಂಟೆಗೆ ಹಿರೆಕೋಡಿ ಗ್ರಾಮದ ಸಂಪಿಗೆ ರಸ್ತೆಯ ತಳವಾರ್ ಲೇನ್‌ನ ಕಚ್ಚಾ ರಸ್ತೆಯಲ್ಲಿ ಫಿರ್ಯಾದಿಯ ಮನೆ ಹಿತ್ತಲಿನಲ್ಲಿ ಇಟ್ಟಂತಹ ಮರಗಳು ಕಳುವಾಗಿದೆ ಎಂದು ಆತ ಪೋಲೀಸರಿಗೆ ಮಾಹಿತಿ ಕೊಟ್ಟಿದ್ದಾನೆಂದು 1 ರಿಂದ 6 ಆರೋಪಿತರಾದ ಸುಭಾಷ್, ಕಿಟ್ಟಿ ಮಂಜ, ಆನಂದ, ಶೇಖರ, ನಾಗರಾಜ ಅಲಿಯಾಸ್ ನಾಗ ಮತ್ತು ಮಣಿ ತಮ್ಮ ಫಿರ್ಯಾದಿ ಫಕೀರಪ್ಪನ ಮೇಲೆ ಕೃತ್ಯವೆಸಗುವ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಕೈಯಲ್ಲಿ ಕಲ್ಲುಗಳು, ದೊಣ್ಣೆಗಳು, ರೀಪರ್‌ಗಳು ಮತ್ತು ಕುಡುಗೋಲುಗಳನ್ನು ಹಿಡಿದುಕೊಂಡು ಫಿರ್ಯಾದಿ ಫಕೀರಪ್ಪ ಮತ್ತು ಚಾಸಾ 4 ರಿಂದ 6ರ ವಿರುದ್ಧ ದೊಂಬಿ ಮಾಡಿದ್ದರು ಮತ್ತು ಚಾಸಾ 4 ಕೇಶವ ಮತ್ತು ಚಾಸಾ 6 ನಾರಾಯಣ ಆರೋಪಿತರು ಮಾಡಿದ ಹಲ್ಲೆಯಿಂದ ತೀವ್ರ ಸ್ವರೂಪದ ಗಾಯಗೊಂಡಿದ್ದರು ಮತ್ತು ಆರೋಪಿತರ ಕೃತ್ಯದಿಂದ ಫಿರ್ಯಾದಿ ಫಕೀರಪ್ಪ ಮತ್ತು ಚಾಸಾ 5 ಗಂಗರಾಜ ಸಾಮಾನ್ಯ ಸ್ವರೂಪದ ಗಾಯಗೊಂಡಿದ್ದರು ಮತ್ತು ಶಾಂತತಾ ಭಂಗವನ್ನುಂಟು ಮಾಡುವ ಉದ್ದೇಶದಿಂದ ಆರೋಪಿತರು ಫಿರ್ಯಾದಿ ಮತ್ತು ಚಾಸಾ 4 ರಿಂದ 6ರವರಿಗೆ ಬೋಳಿ ಮಗನೆ, ಸೂಳೇ ಮಗನೆ ಎಂದು ಅವಾಚ್ಯ ಪದಗಳನ್ನು ಉಪಯೋಗಿಸಿದ್ದರು ಮತ್ತು ಫಿರ್ಯಾದಿ ಮತ್ತು ಸಾಕ್ಷಿದಾರರು ಪೋಲೀಸರಿಗೆ ದೂರು ನೀಡಿದರೆ ಕೊಲೆ ಮಾಡುವುದಾಗಿ ಜೀವ ಬೆದರಿಕೆ ನೀಡಿದ್ದರು ಮತ್ತು ಚಾಸಾ 6 ನಾರಾಯಣರವರ ಮುಂದಿನ ಬಾಗಿಲನ್ನು ಮುರಿದು ನಷ್ಟ ಉಂಟು ಮಾಡಿದ್ದಾರೆ.

ಆದ್ದರಿಂದ, ಫಿರ್ಯಾದಿ ಫಕೀರಪ್ಪ ವ್ಯಾಪ್ತಿಯ ಪೋಲೀಸರಿಗೆ ದೂರು ನೀಡಿದ್ದನು.

**2.** ನೀವು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾಗಿ ವಿಚಾರಣೆ ಮಾಡುವ ಪ್ರಕರಣದಲ್ಲಿ 21 ವರ್ಷ ವಯಸ್ಸಿಗಿಂತ ಕೆಳಗಿನ ಯಾವುದೇ ವ್ಯಕ್ತಿ ಕಾರಗೃಹವಾಸ ಶಿಕ್ಷಿಸಲ್ಪಡುವ ಅಪರಾಧ ಮಾಡಿದ ಬಗ್ಗೆ ದೋಷಿ ಎಂದು ಕಂಡು ಬಂದರೆ ಅಪರಾಧಿಗಳ ಪರಿವೀಕ್ಷಣ ಅಧಿನಿಯಮದ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಮ್ಮ ತೀರ್ಪಿನಲ್ಲಿ ಈ ಪ್ರಕರಣವನ್ನು ಯಾವ ರೀತಿ ವ್ಯವಹರಿಸುತ್ತೀರಿ. ವಿವರಿಸಿ.
**ಅಂಕಗಳು: 10**

**3.** ಸಂಗತಿಗಳಿಂದ ಎದುರಾಳಿಗಳ ವಾದ ಭಾವಿಸಿಕೊಂಡು ಸಮಂಜಸ ಮತ್ತು ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ಈ ಕೆಳಗಿನ ಪ್ರಕರಣದಲ್ಲಿ ತೀರ್ಪನ್ನು ನೀಡಿ
**ಅಂಕಗಳು: 75**

ಸಿ.ಸಿ.ನಂ.650/2010

ಫಿರ್ಯಾದುದಾರ: ಕರ್ನಾಟಕ ಸರ್ಕಾರ
ಪ್ರತಿನಿಧಿಸುವವರು: ಗಂಗಾನಗರ ಪೋಲೀಸ್‌ಠಾಣೆ

**ವಿರುದ್ಧ**

ಆರೋಪಿಗಳು:

1. ಸುಬ್ಬರಾಯ
ತಂದೆ ಗಂಗಾಧರಪ್ಪ
ವಯಸ್ಸು 40 ವರ್ಷ
ಕೆಳಗದ್ದೆ ಗ್ರಾಮ
ಗಂಗಾನಗರ ತಾಲೂಕು

2. ಕೃಷ್ಣಪ್ಪ
ತಂದೆ ಗಂಗಾಧರಪ್ಪ
ವಯಸ್ಸು 38 ವರ್ಷ
ಕೆಳಗದ್ದೆ ಗ್ರಾಮ
ಗಂಗಾನಗರ ತಾಲೂಕು

3. ರಮೇಶ
ತಂದೆ ಮುನಿಯಪ್ಪ
ವಯಸ್ಸು 50 ವರ್ಷ
ಗಂಗಾನಗರ ತಾಲೂಕು

**ಪ್ರಕರಣದ ಸಂಗತಿಗಳು:**

ಗಂಗಾನಗರ ಪೋಲೀಸ್ ಠಾಣೆಯವರು ಸಲ್ಲಿಸಿದ ದೋಷಾರೋಪಣ ಪತ್ರದಲ್ಲಿ ಆಪಾದಿಸಿದಂತೆ ದಿನಾಂಕ 3.6.2010ರಂದು ಸಾಯಂಕಾಲ 5 ಗಂಟೆಗೆ ಆರೋಪಿ 1 ರಿಂದ 3 ಕೃತ್ಯವೆಸಗುವ ಸಮಾನ ಉದ್ದೇಶದಿಂದ ಕೆಳಗದ್ದೆ ಗ್ರಾಮದಲ್ಲಿ ಇರುವ ಸರ್ವೆ ನಂ.15ರಲ್ಲಿ 1ಎಕರೆ 10 ಗುಂಟೆ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿದ್ದರು ಮತ್ತು ಟ್ರಾಕ್ಟರ್ ಸಹಾಯದಿಂದ ಸದರಿ ಜಮೀನನ್ನು ಕಾನೂನು ಬಾಹಿರವಾಗಿ ಉಳುಮೆ ಮಾಡಲು ಪ್ರಾರಂಭಿಸಿದರು. ಚಾಸಾ 1 ಮತ್ತು 2 ರವರು ಸಿವಿಲ್ ನ್ಯಾಯಾಲಯವು ನಿಷೇಧಾತ್ಮಕ ಆದೇಶ ನೀಡಿದೆ ಎಂದು ಆರೋಪಿತರ ಕೃತ್ಯವನ್ನು ಪ್ರಶ್ನಿಸಿದಾಗ 1 ರಿಂದ 3 ಆರೋಪಿತರು ಚಾಸಾ 1 ಮತ್ತು 2 ರವರಿಗೆ ಬೋಳಿಮಕ್ಕಳೆ ಮತ್ತು ಸೂಳೆಮಕ್ಕಳೆ ಎಂದು ಅವಾಚ್ಯ ಬಾಷೆಯಲ್ಲಿ ಬೈದು ಚಾಸಾ 1 ಮತ್ತು 2 ರವರಿಗೆ ಕೈಗಳಿಂದ ಹೊಡೆದು ಹಲ್ಲೆ ಮಾಡಿ ಚಾಸಾ 1 ರವರು ಧರಿಸಿದ ನೈಟಿಯನ್ನು ಎಳೆದಾಡಿದಾಗ ಹರಿದಿರುತ್ತದೆ ಮತ್ತು ಆ ಮೂಲಕ ಚಾಸಾ 1 ರವರ ಮಾನಭಂಗ ಮಾಡಲು ಪ್ರಯತ್ನಿಸಿದರು ಮತ್ತು ಎಲ್ಲಾ ಆರೋಪಿತರು ಚಾಸಾ 1 ಮತ್ತು 2 ರವರಿಗೆ ಪೋಲೀಸರಿಗೆ ದೂರು ಕೊಟ್ಟರೆ ನಿಮ್ಮನ್ನು ಕೊಲೆ ಮಾಡುವುದಾಗಿ ಬೆದರಿಕೆ ಒಡ್ಡಿರುತ್ತಾರೆ. ಆದ್ದರಿಂದ ಚಾಸಾ 1 ಮಂಗಳ ಸಂಬಂಧಪಟ್ಟ ವ್ಯಾಪ್ತಿಯ ಪೋಲೀಸರಿಗೆ ದೂರು ನೀಡಿರುತ್ತಾರೆ. ಆದ್ದರಿಂದ ದಿನಾಂಕ 3.6.2010 ರಂದು ಸಂಜೆ 6.45 ಗಂಟೆಗೆ ಕ್ರೈಂ ನಂ.46/2010ರಲ್ಲಿ ಭಾರತ ದಂಡ ಸಂಹಿತೆಯ ಕಲಂ 323, 354, 504, 447, 506 ಜೊತೆಗೆ 34ರ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದ ಬಗ್ಗೆ ಈ ಪ್ರಕರಣ ನೋಂದಣಿಯಾಗಿರುತ್ತದೆ ಮತ್ತು ದಿನಾಂಕ 4.6.2010ರಂದು ಬೆಳಗ್ಗೆ 10.50 ಗಂಟೆಗೆ ಗಂಗಾನಗರ ಪೋಲೀಸು ಠಾಣೆಯ ಪಿ.ಸಿ.1615

ಮೂಲಕ ಗಂಗಾನಗರ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಮ್.ಎಫ್.ಸಿ. ರವರಿಗೆ ಪ್ರಥಮ ವರ್ತಮಾನ ವರದಿ ರವಾನೆಯಾಗಿರುತ್ತದೆ.

ದಿನಾಂಕ 4.6.2010ರಂದು ಚಾಸಾ 9 ಹನುಮಂತರಾಯಪ್ಪ ಎ.ಎಸ್.ಐ. ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದರು ಮತ್ತು ಚಾಸಾ 1 ಮಂಗಳ, ಚಾಸಾ 5 ವೆಂಕಟಪ್ಪ ಮತ್ತು ಚಾಸಾ 6 ನರಸಿಂಹ ಇವರ ಸಮಕ್ಷಮ ಘಟನಾ ಸ್ಥಳದ ಮಹಜರನ್ನು ಮಾಡಿರುತ್ತಾರೆ ಮತ್ತು ಚಾಸಾ 1 ರವರ ಹರಿದ ನೈಟಿಯನ್ನು ಅಮಾನತ್ತು ಮಾಡಿಕೊಂಡಿರುತ್ತಾರೆ. ದಿನಾಂಕ 5.6.2010ರಂದು ಚಾಸಾ 10 ಕೆ.ನಾರಾಯಣ ಪಿ.ಎಸ್.ಐ. ಘಟನಾ ಸ್ಥಳಕ್ಕೆ ಹೋಗಿರುತ್ತಾರೆ ಮತ್ತು ಚಾಸಾ 3 ಅಶ್ವತ್ ಮತ್ತು ಚಾಸಾ 4 ನಾಗಪ್ಪ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತಾರೆ. ದಿನಾಂಕ 8.6.2010ರಂದು ಚಾಸಾ 10 ಮತ್ತೊಮ್ಮೆ ಘಟನಾ ಸ್ಥಳಕ್ಕೆ ಹೋಗಿರುತ್ತಾರೆ ಮತ್ತು ಚಾಸಾ 2 ಮುನಿಯಪ್ಪನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ದಿನಾಂಕ 21.7.2010ರಂದು ಚಾಸಾ 10 ಗಂಗಾನಗರ ಸಾರ್ವಜನಿಕ ಆಸ್ಪತ್ರೆಯಿಂದ ಚಾಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ ಮತ್ತು ಗಂಗಾನಗರ ತಾಲೂಕಿನ ತಾಹಶೀಲ್ದಾರರಿಂದ ಘಟನಾ ಸ್ಥಳದ ಆರ್.ಟಿ.ಸಿ. ಪಡೆದುಕೊಂಡಿರುತ್ತಾರೆ ಮತ್ತು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

ಮ್ಯಾಜಿಸ್ಟ್ರೇಟರು ರೂಪಿಸಿದ ದೋಷಾರೋಪಣೆಯನ್ನು ಆರೋಪಿ 1 ರಿಂದ 3 ಒಪ್ಪಿಕೊಂಡಿರುವುದಿಲ್ಲ. ಅಭಿಯೋಜನೆಯು 8 ಸಾಕ್ಷಿದಾರರನ್ನು ಪ್ರಾ.ಸಾ. 1 ರಿಂದ 8 ಎಂದು ವಿಚಾರಣೆ ಮಾಡಿರುತ್ತಾರೆ ಮತ್ತು 1 ರಿಂದ 8 ದಸ್ತಾವೇಜುಗಳು ಮತ್ತು ಎಮ್.ಒ. 1ನ್ನು ಗುರುತಿಸಿಕೊಂಡಿರುತ್ತಾರೆ.

ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿ 1 ರಿಂದ 3 ರವರ ಹೇಳಿಕೆಗಳನ್ನು ಮಾಡಿಕೊಳ್ಳಲಾಗಿದೆ. ಅವರು ಅಭಿಯೋಜನೆಯ ಪ್ರಕರಣವನ್ನು ನಿರಾಕರಿಸಿರುತ್ತಾರೆ. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯವನ್ನು ನೀಡಿರುವುದಿಲ್ಲ.

ಚಾ.ಸಾ.1–ಪ್ರಾ.ಸಾ.1–ಮಂಗಳ ಗಂಡ ಮುನಿಯಪ್ಪ ದಿನಾಂಕ 15.08.2012ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:

ನನಗೆ ಆರೋಪಿತರು ಗೊತ್ತಿದೆ. ದಿನಾಂಕ 3.6.2010ರಂದು ಸಂಜೆ 5.30 ಗಂಟೆಗೆ ನಾವೆಲ್ಲರೂ ಕೆಳಗದ್ದೆ ಗ್ರಾಮದ ನಮ್ಮ ಜಮೀನು ಸರ್ವೆ ನಂ.15ರ 1 ಎಕರೆ 10 ಗುಂಟೆಯಲ್ಲಿ ಕೆಲಸ ಮಾಡುತ್ತಿದ್ದೆವು. ಆಗ ಎಲ್ಲಾ ಆರೋಪಿತರು ಟ್ರಾಕ್ಟರ್ ಜೊತೆಗೆ ನಮ್ಮ ಜಮೀನಿಗೆ ಬಂದರು ಮತ್ತು ಜಮೀನನ್ನು ಉಳುಮೆ ಮಾಡಲು ಪ್ರಾರಂಭಿಸಿದರು. ನಾವು ಜಮೀನು ಉಳುಮೆ ಮಾಡುವುದನ್ನು ನಿಲ್ಲಿಸಲು ಪ್ರಯತ್ನ ಪಟ್ಟೆವು. ಆಗ ಆರೋಪಿತರು

ನನಗೆ ಮತ್ತು ನನ್ನ ಗಂಡ ಮುನಿಯಪ್ಪನಿಗೆ ಬೋಳಿಮಕ್ಕಳೆ ಸೂಳೆಮಕ್ಕಳೆ ಎಂದು ಬೈದರು ಮತ್ತು ನನಗೆ ಮತ್ತು ನನ್ನ ಗಂಡನಿಗೆ ಕೈಗಳಿಂದ ಹಲ್ಲೆ ಮಾಡಿದರು ಮತ್ತು ಜೀವ ಬೆದರಿಕೆ ಒಡ್ಡಿದರು ಮತ್ತು ನನ್ನ ನೈಟಿಯನ್ನು ಎಳೆದಾಡಿದರು, ಅದು ಹರಿಯಿತು. ನಾನು ಅದೇ ದಿನ ಪೋಲೀಸರಿಗೆ ದೂರನ್ನು ಸಲ್ಲಿಸಿದೆನು. ಈಗ ನಾನು ಕೊಟ್ಟ ದೂರನ್ನು ನೋಡುತ್ತಿದ್ದೇನೆ. ಅದನ್ನು ನಿಶಾನೆ ಪಿ.1 ಎಂದು ನನ್ನ ಸಹಿಯನ್ನು ನಿಶಾನೆ ಪಿ.1(ಎ) ಎಂದು ಗುರುತಿಸಲಾಯಿತು. ಮರುದಿನ ಪೋಲೀಸರು ಸ್ಥಳಕ್ಕೆ ಬಂದರು, ನನ್ನ ಸಮಕ್ಷಮ ಮಹಜರ್ ಬರೆದರು. ಪೋಲೀಸರು ನನ್ನ ನೈಟಿಯನ್ನು ಅಮಾನತು ಪಡಿಸಿಕೊಂಡರು. ಈಗ ಮಹಜರ್ ನೋಡುತ್ತಿದ್ದು ಅದನ್ನು ನಿಶಾನೆ ಪಿ2 ಎಂದು ನನ್ನ ಸಹಿಯನ್ನು ನಿಶಾನೆ ಪಿ2(ಎ) ಎಂದು ಗುರುತಿಸಲಾಯಿತು. ನಾನು ನನ್ನ ನೈಟಿಯನ್ನು ಗುರುತಿಸಿದ್ದು ಅದನ್ನು ಎಮ್.ಒ.1 ಎಂದು ಗುರುತಿಸಲಾಯಿತು. ಸರ್ವೆ ನಂ.15 ಜಮೀನಿನಲ್ಲಿ ನಾವಿಬ್ಬರು ಉಳುಮೆ ಮಾಡಬಾರದೆಂದು ನಮ್ಮ ವಿರುದ್ಧ ಸಿವಿಲ್ ನ್ಯಾಯಾಲಯ ನಿಷೇಧಾತ್ಮಕ ಆದೇಶ ಮಾಡಿತ್ತು.

<u>ಪಾಟಿ ಸವಾಲು: ಆರೋಪಿ ಪರ ವಕೀಲರಿಂದ:</u>

ನನ್ನ ಸ್ವಂತ ಊರು ಕೆಳಗದ್ದೆ ಗ್ರಾಮ. ನನ್ನ ಗಂಡನ ಸ್ವಂತ ಊರು ಹನುಮಂತನಗರ. ಕಳೆದ 4–5 ವರ್ಷಗಳಿಂದ ನಾನು ಕೆಳಗದ್ದೆ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ಸರ್ವೆ ನಂ.15ಕ್ಕೆ ಸಂಬಂಧಿಸಿದಂತೆ 2 ವ್ಯಾಜ್ಯಗಳು ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದೆ. ಸರ್ವೆ ನಂ.15ರಲ್ಲಿ ಆರೋಪಿತರು ಜಮೀನು ಹೊಂದಿದ್ದಾರೆಯೇ ಎಂದು ನನಗೆ ಗೊತ್ತಿಲ್ಲ. ಆರೋಪಿತರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆಂದು ಅವರ ವಿರುದ್ಧ ಕ್ರಮ ತೆಗೆದುಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.15 ಆರೋಪಿ 1ರವರಿಗೆ ಸೇರಿದೆಯೇ ಎಂದು ನನಗೆ ಗೊತ್ತಿಲ್ಲ. ನಾನು ಪ್ರಾವಿಜನ್ ಸ್ಟೋರ್ ನಡೆಸುತ್ತಿದ್ದೇನೆ ಎಂದರೆ ನಿಜ ಮತ್ತು ನಾನು ಪ್ರತಿದಿನ ಅಂಗಡಿಯನ್ನು ರಾತ್ರಿ 8–9 ಗಂಟೆಗೆ ಬಂದ್ ಮಾಡುತ್ತೇನೆ. ನನ್ನ ಪ್ರಾವಿಜನ್ ಸ್ಟೋರಿನಿಂದ ಸರ್ವೆ ನಂ.15 ಜಮೀನು 1 ಕಿಲೋಮೀಟರ್ ಅಂತರದಲ್ಲಿದೆ. ನಾವು ಆರೋಪಿತರು ಜಮೀನನ್ನು ಉಳುಮೆ ಮಾಡುವಾಗ ಅಡ್ಡಿ ಪಡಿಸಿದೆವು ಎಂದು ಸೂಚಿಸುವುದು ನಿಜವಲ್ಲ. ನನಗೆ ಸರ್ವೆ ನಂ.15ರ ಚಕ್ಕುಬಂದಿ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಸೂಚಿಸುವುದು ನಿಜವಲ್ಲ. ಪೋಲೀಸರು ನನ್ನ ಸಮಕ್ಷಮ ಮಹಜರು ಮಾಡಲು ಸ್ಥಳಕ್ಕೆ ಬಂದಿಲ್ಲ ಎಂದು ಸೂಚಿಸುವುದು ನಿಜವಲ್ಲ. ಪೋಲೀಸರು ನನ್ನ ನೈಟಿಯನ್ನು ಅಮಾನತು ಪಡಿಸಿಕೊಂಡಿಲ್ಲ ಎಂದು ಸೂಚಿಸುವುದು ನಿಜವಲ್ಲ. ಆರೋಪಿತರಿಗೆ ತೊಂದರೆ ಕೊಡಲು ನಾನು ಸುಳ್ಳು ದೂರು ಕೊಟ್ಟಿದ್ದೇನೆ ಎಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/–
ಜೆ.ಎಮ್.ಎಫ್.ಸಿ.

<u>ಪ್ರಾ.ಸಾ.2 – ಪ್ರಾ.ಸಾ.2 – ಮುನಿಯಪ್ಪ</u> ದಿನಾಂಕ 18.04.2013ರಂದು ಪ್ರಮಾಣ ಮಾಡಿಸಲಾಯಿತು

<u>ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:</u>

ನನಗೆ ಆರೋಪಿತರು ಗೊತ್ತಿದೆ. ನಾನು ಮತ್ತು ಚಾಸಾ 1 ಸರ್ವೆ ನಂ.15ರಲ್ಲಿ ಕೆಲಸ ಮಾಡುತ್ತಿದ್ದೆವು. ಸಿವಿಲ್ ನ್ಯಾಯಾಲಯ ನಿಷೇಧಾತ್ಮಕ ಆದೇಶ ಮಾಡಿದ್ದರು. ಆರೋಪಿತರು ಟ್ರ್ಯಾಕ್ಟರ್ ಜೊತೆಗೆ ಸರ್ವೆ ನಂ.15ರಲ್ಲಿ ಉಳುಮೆ ಮಾಡಲು ಬಂದಿದ್ದರು. ನಾನು ಮತ್ತು ಚಾಸಾ 1 ಆರೋಪಿತರ ಕೃತ್ಯವನ್ನು ಪ್ರಶ್ನಿಸಿದೆವು. ಆಗ ನಮ್ಮ ಹಾಗೂ ಆರೋಪಿತರ ನಡುವೆ ಮಾತಿನ ಚಕಮಕಿ ನಡೆಯಿತು. ಆರೋಪಿತರು ನನಗೆ ಮತ್ತು ಚಾಸಾ 1 ರವರಿಗೆ ಕೈಗಳಿಂದ ಹಲ್ಲೆ ಮಾಡಿದರು. ಅವರು ಚಾಸಾ 1 ರವರ ನೈಟಿಯನ್ನು ಹರಿದರು. ನಂತರ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಎಂ.ಒ.1 ಚಾಸಾ 1 ರವರ ಹರಿದ ನೈಟಿ, ಅದನ್ನು ಈಗಾಗಲೇ ಎಮ್.ಒ.1 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>

ನನ್ನ ಸ್ವಂತ ಊರು ಹನುಮಂತನಗರ. ಚಾಸಾ 1 ನನ್ನ ಹೆಂಡತಿ. ನನ್ನ ಮಾವ ಸರ್ವೆ ನಂ.15ರಲ್ಲಿ ಹೊಂದಿರುವ ಆಸ್ತಿಯ ವಿಸ್ತೀರ್ಣ ಗೊತ್ತಿಲ್ಲ. ಸರ್ವೆ ನಂ.15ರಲ್ಲಿ ಆರೋಪಿತರು ಜಮೀನು ಹೊಂದಿದ್ದಾರೆಂದರೆ ನಿಜ. ನನ್ನ ಮಾವ ಸರ್ವೆ ನಂ.15ರಲ್ಲಿ 1 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನು ಹೊಂದಿದ್ದಾರೆ. ಆರೋಪಿತರು ತಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿರುವಾಗ ನಾವು ಜಗಳ ಮಾಡಿದೆವು ಎಂದು ಸೂಚಿಸುವುದು ನಿಜವಲ್ಲ. ಆರೋಪಿತರಿಗೆ ತೊಂದರೆ ಕೊಡಲು ನಾನು ನನ್ನ ಹೆಂಡತಿ ಮುಖಾಂತರ ದೂರು ಕೊಟ್ಟಿದ್ದೇನೆ ಎಂದು ಸೂಚಿಸುವುದು ನಿಜವಲ್ಲ. ಆರೋಪಿತರು ಯಾವುದೇ ಅಪರಾಧ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಘಟನೆ ನಡೆಯುವಾಗ ನನ್ನ ಹೆಂಡತಿ ಕಪ್ಪು ಚುಕ್ಕೆ ಇರುವ ನೈಟಿಯನ್ನು ಧರಿಸಿದ್ದಳು. ನನ್ನ ಹೆಂಡತಿ ಚೂಡಿದಾರ್ ಡ್ರೆಸ್ ಧರಿಸಿದ್ದಳು ಎಂದು ಸೂಚಿಸುವುದು ನಿಜವಲ್ಲ. ನಾನು ಸಿವಿಲ್ ನ್ಯಾಯಾಲಯದಿಂದ ನಮಗೆ ಅನುಕೂಲವಾಗುವ ಆದೇಶ ಪಡೆಯಲು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ

ಸಹಿ/–

ಜೆ.ಎಮ್.ಎಫ್.ಸಿ.

ಚಾ.ಸಾ.3– ಪ್ರಾ.ಸಾ.3– ಅಶ್ವತ್,

ದಿನಾಂಕ 22.08.2013ರಂದು ಪ್ರಮಾಣ ಮಾಡಿಸಲಾಯಿತು

ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:

ನನಗೆ ಆರೋಪಿತರು ಗೊತ್ತಿದೆ. ಆರೋಪಿತರು ಮತ್ತು ಚಾಸಾ 1 ಮತ್ತು 2 ರ ನಡುವೆ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.
(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಮಾನ್ಯ ಎಪಿಪಿ ರವರು ಪ್ರಾರ್ಥಿಸಿರುತ್ತಾರೆ. ಅನುಮತಿ ನೀಡಲಾಗಿದೆ. ಮಾನ್ಯ ಎಪಿಪಿ ಯವರಿಗೆ ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು: ಎಪಿಪಿ ಯವರಿಂದ:

ದಿನಾಂಕ 3.6.2010ರಂದು ಸಂಜೆ 5 ಗಂಟೆಗೆ ಆರೋಪಿತರು ಚಾಸಾ 1 ರವರಿಗೆ ಸೇರಿದ ಸರ್ವೆ ನಂ.15 ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿದರು ಎಂದು ಸೂಚಿಸುವುದು ನಿಜವಲ್ಲ. ಆರೋಪಿತರು ಟ್ರಾಕ್ಟರ್ ಸಹಾಯದಿಂದ ಆ ಜಮೀನನ್ನು ಕಾನೂನು ಬಾಹಿರವಾಗಿ ಉಳುಮೆ ಮಾಡುತ್ತಿದ್ದರು ಎಂದು ಸೂಚಿಸುವುದು ನಿಜವಲ್ಲ. ಚಾಸಾ 1 ಮತ್ತು 2 ರವರು ಆರೋಪಿತರ ಕೃತ್ಯವನ್ನು ಪ್ರಶ್ನಿಸಿದಾಗ ಆರೋಪಿತರು ಚಾಸಾ 1 ಮತ್ತು 2 ರವರಿಗೆ ಬೈದು ಚಾಸಾ 1 ರವರ ಮಾನಭಂಗ ಮಾಡುವ ಉದ್ದೇಶದಿಂದ ನೈಟಿಯನ್ನು ಹರಿದು ಹಾಕಿದರು ಮತ್ತು ಜೀವ ಬೆದರಿಕೆ ಹಾಕಿದರು ಎಂದು ಸೂಚಿಸುವುದು ನಿಜವಲ್ಲ. ನಾನು ಈ ಘಟನೆಯನ್ನು ವೀಕ್ಷಿಸಿ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆಂದು ಸೂಚಿಸುವುದು ನಿಜವಲ್ಲ. ನಾನು ಪೋಲೀಸರ ಮುಂದೆ ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ.3 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/–
ಜೆ.ಎಮ್.ಎಫ್.ಸಿ.

ಚಾ.ಸಾ.4– ಪ್ರಾ.ಸಾ.4 – ನಾಗಪ್ಪ

ದಿನಾಂಕ 22.08.2013ರಂದು ಪ್ರಮಾಣ ಮಾಡಿಸಲಾಯಿತು

ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:

ನನಗೆ ಆರೋಪಿತರು ಗೊತ್ತಿದೆ. ಆರೋಪಿತರು ಮತ್ತು ಚಾಸಾ 1 ಮತ್ತು 2 ರ ನಡುವೆ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಮಾನ್ಯ ಎಪಿಪಿ ರವರು ಪ್ರಾರ್ಥಿಸಿರುತ್ತಾರೆ. ಅನುಮತಿ ನೀಡಲಾಗಿದೆ. ಮಾನ್ಯ ಎಪಿಪಿ ಯವರಿಗೆ ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು: ಎಪಿಪಿ ಯವರಿಂದ:

ದಿನಾಂಕ 3.6.2010ರಂದು ಸಂಜೆ 5 ಗಂಟೆಗೆ ಆರೋಪಿತರು ಚಾಸಾ 1 ರವರಿಗೆ ಸೇರಿದ ಸರ್ವೆ ನಂ.15 ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿದರು ಎಂದು ಸೂಚಿಸುವುದು ನಿಜವಲ್ಲ. ಆರೋಪಿತರು ಟ್ರಾಕ್ಟರ್ ಸಹಾಯದಿಂದ ಆ ಜಮೀನನ್ನು ಕಾನೂನು ಬಾಹಿರವಾಗಿ ಉಳುಮೆ ಮಾಡುತ್ತಿದ್ದರು ಎಂದು ಸೂಚಿಸುವುದು ನಿಜವಲ್ಲ. ಚಾಸಾ 1 ಮತ್ತು 2 ರವರು ಆರೋಪಿತರ ಕೃತ್ಯವನ್ನು ಪ್ರಶ್ನಿಸಿದಾಗ ಆರೋಪಿತರು ಚಾಸಾ 1 ಮತ್ತು 2 ರವರಿಗೆ ಬೈದು ಚಾಸಾ 1 ರವರ ಮಾನಭಂಗ ಮಾಡುವ ಉದ್ದೇಶದಿಂದ ನೈಟಿಯನ್ನು ಹರಿದು ಹಾಕಿದರು ಮತ್ತು ಜೀವ ಬೆದರಿಕೆ ಹಾಕಿದರು ಎಂದು ಸೂಚಿಸುವುದು ನಿಜವಲ್ಲ. ನಾನು ಈ ಘಟನೆಯನ್ನು ವೀಕ್ಷಿಸಿ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆಂದು ಸೂಚಿಸುವುದು ನಿಜವಲ್ಲ. ನಾನು ಪೋಲೀಸರ ಮುಂದೆ ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ.4 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/–
ಜೆ.ಎಮ್.ಎಫ್.ಸಿ.

ಚಾ.ಸಾ.5– ಪ್ರಾ.ಸಾ.5 – ವೆಂಕಟಪ್ಪ

ದಿನಾಂಕ 22.08.2013ರಂದು ಪ್ರಮಾಣ ಮಾಡಿಸಲಾಯಿತು

ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:

ನನಗೆ ಆರೋಪಿತರು ಗೊತ್ತಿದೆ. ಘಟನೆಯಾದ ಮರುದಿನ ಪೋಲೀಸರು ಘಟನಾ ಸ್ಥಳಕ್ಕೆ ಬಂದರು ಮತ್ತು ನನ್ನ ಸಮಕ್ಷಮ ಮಹಜರ್ ಬರೆದರು. ನಾನು ಮಹಜರಿಗೆ ಸಹಿ ಮಾಡಿದ್ದೇನೆ. ಈಗ ನಿಶಾನೆ ಪಿ.2 ನೋಡುತ್ತಿದ್ದೇನೆ. ನನ್ನ ಸಹಿಯನ್ನು ನಿಶಾನೆ ಪಿ.2(ಬಿ) ಎಂದು ಗುರುತಿಸಲಾಯಿತು. ಮಹಜರ್ ಮಾಡುವ ಸಮಯದಲ್ಲಿ ಪೋಲೀಸರು ಚಾಸಾ 1 ರವರ ಹರಿದ ನೈಟಿಯನ್ನು ಅಮಾನತು ಪಡಿಸಿಕೊಂಡರು. ಆ ನೈಟಿಯನ್ನು ಈಗ ಗುರುತಿಸಿದ್ದೇನೆ, ಅದನ್ನು ಈಗಾಗಲೇ ಎಮ್.ಓ.1 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದ

ಪೋಲೀಸರು ದಿನಾಂಕ 3.6.2010ರಂದು ಮಹಜರು ಬರೆದರು. ನನಗೆ ಮಹಜರ್ ಬರೆದ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ಪೋಲೀಸರು ಯಾವ ಸಮಯದಲ್ಲಿ ಸ್ಥಳಕ್ಕೆ ಬಂದರು ಮತ್ತು ಮಹಜರ್ ಮಾಡಿದರು

ಎಂದು ನೆನಪಿಲ್ಲ. ಆ ಸಮಯದಲ್ಲಿ ನಾನು, ಮಂಗಳ, ಅಶ್ವತ್, ಮುನಿಯಪ್ಪ, ನರಸಿಂಹ ಹಾಜರಿದ್ದೆವು. ನಾನು ಮಹಜರಿಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ಸೂಚಿಸುವುದು ನಿಜವಲ್ಲ. ನಾನು ಆಪಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ಸೂಚಿಸುವುದು ನಿಜವಲ್ಲ.

ಓ.ಹೇ.ಕೆ.ಸರಿಯಿದೆ

ಮರುವಿಚಾರಣೆ: ಇಲ್ಲ

ಸಹಿ/–
ಜೆ.ಎಮ್.ಎಫ್.ಸಿ.

ಪ್ರಾ.ಸಾ.7– ಪ್ರಾ.ಸಾ.6 – ಡಾ.ಕೃಷ್ಣ ಕುಮಾರ್

ದಿನಾಂಕ 03.09.2013ರಂದು ಪ್ರಮಾಣ ಮಾಡಿಸಲಾಯಿತು

ಮುಖ್ಯವಿಚಾರಣೆ ಎ.ಪಿ.ಪಿ.ಯವರಿಂದ

ನಾನು 2010ರಲ್ಲಿ ಗಂಗಾನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ದಿನಾಂಕ 3.6.2010ರಂದು ರಾತ್ರಿ 8–10 ಗಂಟೆಗೆ ಮಂಗಳ ಎನ್ನುವವರು ಹಲ್ಲೆಗೊಳಗಾಗಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದಳು. ಅವಳನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಅವಳ ದೇಹದಲ್ಲಿ ಕಂಡುಬಂತು.

1) 0.5 x 6 ಸೆ.ಮಿ. ಅಳತೆಯ ಬಲ ಕೈಯ್ಯ ಒಳಭಾಗದಲ್ಲಿ ಹರಿದ ಗಾಯ

2) 0.5 x 6 ಸೆ.ಮಿ. ಅಳತೆಯ ಎಡ ಕೈಯ್ಯಲ್ಲಿ ಹರಿದ ಗಾಯ. ಬಟ್ಟೆ ಹರಿದಿತ್ತು

ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿತ್ತು. ನಾನು ಗಾಯದ ಪ್ರಮಾಣ ಪತ್ರ ಕೊಟ್ಟಿದ್ದೇನೆ ಅದನ್ನು ನಿಶಾನೆ ಪಿ.5 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಶಾನೆ ಪಿ.5(ಎ) ಎಂದು ಗುರುತಿಸಲಾಯಿತು.

ಅದೇ ದಿನ ರಾತ್ರಿ 8–10 ಗಂಟೆಗೆ ಮುನಿಯಪ್ಪ ಎನ್ನುವವರು ಹಲ್ಲೆಗೊಳಗಾಗಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರನ್ನು ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಅವಳ ದೇಹದಲ್ಲಿ ಕಂಡುಬಂತು.

1) ಬಲ ಕೈ ಮತ್ತು ಬಲ ಎದೆಯಲ್ಲಿ ಮತ್ತು ಬಲ ಬೆನ್ನಿನಲ್ಲಿ ನೋವಿತ್ತು ಮತ್ತು ನೋವಿದೆ ಎಂದು ಹೇಳುತ್ತಿದ್ದರು

ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿತ್ತು. ನಾನು ಗಾಯದ ಪ್ರಮಾಣ ಪತ್ರ ಕೊಟ್ಟಿದ್ದೇನೆ ಅದನ್ನು ನಿಶಾನೆ ಪಿ.6 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಶಾನೆ ಪಿ.6(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>

ಒಬ್ಬ ವ್ಯಕ್ತಿ ಎಡವಿ ಕೆಳಗೆ ಬಿದ್ದರೆ ನಿಶಾನೆ ಪಿ.5 ಮತ್ತು 6 ರಲ್ಲಿ ನಮೂದಿಸಿದ ಗಾಯಗಳು ಆಗಬಹುದು ಎಂದರೆ ನಿಜ. ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯಗಳ ವಯಸ್ಸು ಹೇಳಿಲ್ಲ ಎಂದರೆ ನಿಜ, ಆದರೆ ಎಲ್ಲಾ ಗಾಯಗಳು ತಾಜಾ ಸ್ವರೂಪದ್ದಾಗಿತ್ತು.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/–
ಜೆ.ಎಮ್.ಎಫ್.ಸಿ.

<u>ಜಾ.ಸಾ.9 – ಪ್ರಾ.ಸಾ.7 – ಹನುಮಂತರಾಯಪ್ಪ, ಎ.ಎಸ್.ಐ.</u>

ದಿನಾಂಕ 03.10.2013ರಂದು ಪ್ರಮಾಣ ಮಾಡಿಸಲಾಯಿತು

<u>ಮುಖ್ಯವಿಚಾರಣೆ ಎ.ಪಿ.ಪಿ.ಯವರಿಂದ</u>

ನಾನು ದಿನಾಂಕ 9.6.2008ರಿಂದ 22.06.2011ರ ವರೆಗೆ ಗಂಗಾನಗರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕೆಲಸ ಮಾಡುತ್ತಿದ್ದನು. ನಾನು ಈಗ ಹನುಮಂತನಗರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 3.6.2010ರಂದು ನಾನು ಪೋಲೀಸ್ ಠಾಣೆಯ ಕರ್ತವ್ಯದಲ್ಲಿದ್ದಾಗ ಸಾಯಂಕಾಲ 6.45 ಗಂಟೆಗೆ ಕೆಳಗದ್ದೆ ಗ್ರಾಮದ ಮಂಗಳ ಎನ್ನುವವರು ನನ್ನ ಮುಂದೆ ಹಾಜರಾದರು ಮತ್ತು ಲಿಖಿತ ದೂರನ್ನು ಕೊಟ್ಟರು. ನಾನು ಅದನ್ನು ಕ್ರೈಂ ನಂ.46/2010ರಲ್ಲಿ ನೋಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಾನು ಈಗ ನಿಶಾನೆ ಪಿ.1 ರಲ್ಲಿ ನನ್ನ ಸಹಿ ನೋಡುತ್ತಿದ್ದು ಅದನ್ನು ನಿಶಾನೆ ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಸಾನೆ.ಪಿ7 ಎಂದು ನನ್ನ ಸಹಿಯನ್ನು ನಿಶಾನೆ ಪಿ.7(ಎ) ಎಂದು ಗುರುತಿಸಲಾಯಿತು.

ದಿನಾಂಕ 4.6.2010ರಂದು ಬೆಳಗ್ಗೆ 10.30 ಗಂಟೆಗೆ ಘಟನಾ ಸ್ಥಳಕ್ಕೆ ಹೋದೆನು ಮತ್ತು ಜಾಸಾ 1. ಸಾಕ್ಷಿದಾರರಾದ ಜಾಸಾ 5 ಮತ್ತು 6 ರವರ ಸಮಕ್ಷಮ ಮಹಜರು ಬರೆದೆನು ಮತ್ತು ಜಾಸಾ 1 ಹಾಜರು ಮಾಡಿದ ಹರಿದ ನೈಟಿಯನ್ನು ಅಮಾನತು ಪಡಿಸಿಕೊಂಡೆನು. ನಾನೀಗ ನಿಶಾನೆ ಪಿ.2ರಲ್ಲಿ ಇರುವ ನನ್ನ ಸಹಿಯನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ.2(ಸಿ) ಎಂದು ಗುರುತಿಸಲಾಯಿತು. ನಾನು ಅಮಾನತು ಪಡಿಸಿದ ನೈಟಿಯನ್ನು ನೋಡುತ್ತಿದ್ದು ಅದನ್ನು ಎಮ್.ಒ.1 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಈ ಪ್ರಕರಣದ ಮುಂದಿನ ತನಿಖೆಗೋಸ್ಕರ ಕೇಸಿನ ಕಡತವನ್ನು ಜಾಸಾ 10ರವರಿಗೆ ಹಸ್ತಾಂತರಿಸಿದೆನು.

<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>

ಮಂಗಳ ಒಬ್ಬಳೇ ಪೋಲೀಸ್ ಠಾಣೆಗೆ ದೂರು ಕೊಡಲು ಬಂದಿದ್ದಳು. ದೂರು ಕೊಡಲು ಬಂದಿದ್ದಾಗ ಅವಳು ಹರಿದ ನೈಟಿಯನ್ನು ಧರಿಸಿದ್ದಳು. ನಾನು ಮಹಜರನ್ನು ಪೋಲೀಸ್ ಠಾಣೆಯಲ್ಲಿ ತಯಾರಿಸಿದೆನು ಮತ್ತು ಸಾಕ್ಷಿದಾರರ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ತೆಗೆದುಕೊಂಡೆನು ಎಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/–
ಜೆ.ಎಮ್.ಎಫ್.ಸಿ.

<u>ಚಾ.ಸಾ.10 – ಪ್ರಾ.ಸಾ.8 – ಕೆ.ನಾರಾಯಣ ಪಿ.ಎಸ್.ಐ.</u>

ದಿನಾಂಕ 03.10.2013ರಂದು ಪ್ರಮಾಣ ಮಾಡಿಸಲಾಯಿತು

<u>ಮುಖ್ಯವಿಚಾರಣೆ ಎ.ಪಿ.ಪಿ.ಯವರಿಂದ</u>

ನಾನು ದಿನಾಂಕ 28.8.2008ರಿಂದ 5.7.2011ರ ವರೆಗೆ ಗಂಗಾನಗರ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕೆಲಸ ಮಾಡುತ್ತಿದ್ದೆನು.

ದಿನಾಂಕ 5.6.2010ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗೋಸ್ಕರ ಚಾಸಾ.9 ರವರಿಂದ ಸ್ವೀಕರಿಸಿದೆನು ಮತ್ತು ಘಟನಾ ಸ್ಥಳಕ್ಕೆ ಹೋದೆನು, ಚಾಸಾ.3 ಅಶ್ವತ್ ಮತ್ತು ಚಾಸಾ.4 ನಾಗಪ್ಪರವರ ಹೇಳಿಕೆಗಳನ್ನು ಮಾಡಿಕೊಂಡೆನು. ಆರೋಪಿತರು ನ್ಯಾಯಾಲಯಕ್ಕೆ ಶರಣಾಗಿ ಜಾಮೀನು ಮೇಲೆ ಬಿಡುಗಡೆ ಆದರೆಂದು ನನಗೆ ತಿಳಿದು ಬಂತು. ದಿನಾಂಕ 8.6.2010ರಂದು ನಾನು ಗ್ರಾಮಕ್ಕೆ ಹೋದೆನು ಮತ್ತು ಚಾಸಾ 2 ಮುನಿಯಪ್ಪನ ಹೇಳಿಕೆ ಮಾಡಿಕೊಂಡೆನು. ದಿನಾಂಕ 21.7.2010 ರಂದು ಗಂಗಾನಗರ ಸಾರ್ವಜನಿಕ ಆಸ್ಪತ್ರೆಯಿಂದ ಚಾಸಾ.1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡೆನು. ಅದೇ ದಿನ ಗಂಗಾನಗರ ತಾಲೂಕಿನ ತಾಹಶೀಲ್ದಾರರಿಂದ ಘಟನಾ ಸ್ಥಳದ ಆರ್.ಟಿ.ಸಿ. ಪಡೆದುಕೊಂಡೆನು. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ. ಈಗ ಆರ್.ಟಿ.ಸಿ. ನೋಡುತ್ತಿದ್ದು ಅದನ್ನು ನಿಶಾನೆ ಪಿ.8 ಎಂದು ಗುರುತಿಸಲಾಯಿತು. ಚಾಸಾ.3 ಮತ್ತು 4 ನನ್ನ ಮುಂದೆ ನಿಶಾನೆ ಪಿ.3 ಮತ್ತು 4 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ.

<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>

ಮಹಜರಿನಲ್ಲಿ ಹೇಳಿದಂತೆ ಘಟನಾ ಸ್ಥಳದ ಪಶ್ಚಿಮ ದಿಕ್ಕಿನಲ್ಲಿ ಆರೋಪಿ 1 ಸುಬ್ಬರಾಯನ ಜಮೀನು ಇದೆ ಎಂದರೆ ನಿಜ. ಚಾಸಾ.1 ಮತ್ತು ಪ್ರತ್ಯಕ್ಷ ಸಾಕ್ಷಿದಾರರ ನಡುವೆ ಏನು ಸಂಬಂಧ ಇದೆಯೆಂದು ವಿಚಾರಿಸಿಲ್ಲ. ನಾನು ಸರಿಯಾಗಿ ತನಿಖೆ ಮಾಡದೆ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/–

<u>ದಸ್ತಾವೇಜುಗಳು</u>

| | | |
|---|---|---|
| ನಿಶಾನೆ.ಪಿ.1 | : | ದೂರು |
| ನಿಶಾನೆ.ಪಿ.2 | : | ಮಹಜರು |
| ನಿಶಾನೆ.ಪಿ.3 | : | ಚಾ.ಸಾ. 3 ರವರ ಹೇಳಿಕೆ |
| ನಿಶಾನೆ.ಪಿ.4 | : | ಚಾ.ಸಾ. 4 ರವರ ಹೇಳಿಕೆ |
| ನಿಶಾನೆ.ಪಿ.5 | : | ಚಾ.ಸಾ.1 ರವರ ಗಾಯದ ಪ್ರಮಾಣ ಪತ್ರ |
| ನಿಶಾನೆ.ಪಿ.6 | : | ಚಾ.ಸಾ.2 ರವರ ಗಾಯದ ಪ್ರಮಾಣ ಪತ್ರ |
| ನಿಶಾನೆ.ಪಿ.7 | : | ಪ್ರಥಮ ವರ್ತಮಾನ ವರದಿ |
| ನಿಶಾನೆ.ಪಿ.8 | : | ಆರ್.ಟಿ.ಸಿ. |

*********